# ಕರ್ನಾಟಕ ರಾಜ್ಯ ವಕ್ಫ್ ಮಹಿಳಾ ಅಭಿವೃದ್ಧಿ ಪ್ರತಿಷ್ಠಾನದ ನಡವಳಿಗಳು

ವಿಷಯ: ಅಲ್ಪಸಂಖ್ಯಾತರ ಮುಸ್ಲಿಂ ಮಹಿಳೆಯರಿಗೆ ಗಣಕಯಂತ್ರ ತರಬೇತಿ ಬಗ್ಗೆ ಹೊಸ ಯೋಜನೆ ಅನುಷ್ಠಾನ ಕುರಿತು.

ಓದಲಾಗಿದೆ: 1. ಸರ್ಕಾರದ ಆದೇಶ ಸಂಖ್ಯೆ: RD 31 WGA 1991, ದಿನಾಂಕ: 27.03.1992

2. ದಿನಾಂಕ: 06.10.2009ರಂದು ನಡೆದ ಕರ್ನಾಟಕ ರಾಜ್ಯ ವಕ್ಫ್ ಮಹಿಳಾ ಅಭಿವೃದ್ಧಿ ಪ್ರತಿಷ್ಠಾನದ ಸಭೆಯ ನಡವಳಿ

ಪ್ರಸ್ತಾವನೆ:

ಕರ್ನಾಟಕ ರಾಜ್ಯ ವಕ್ಫ್ ಮಹಿಳಾ ಅಭಿವೃದ್ಧಿ ಪ್ರತಿಷ್ಠಾನದ ಸಭೆಯ ದಿನಾಂಕ: 06.10.2009 ರಂದು ಮಾನ್ಯ ವಕ್ಫ್, ಹಜ್ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವರ ಅಧ್ಯಕ್ಷತೆಯಲ್ಲಿ ನಡೆಸಲಾಗಿದ್ದು, ಮೇಲೆ ಓದಲಾದ ಕ್ರಮ ಸಂಖ್ಯೆ (2)ರಲ್ಲಿ ತೀರ್ಮಾನ ಕೈಗೊಂಡು ಅಲ್ಪಸಂಖ್ಯಾತರ ಮುಸ್ಲಿಂ ಮಹಿಳೆಯರಿಗೆ ಗಣಕಯಂತ್ರ ತರಬೇತಿ ಬಗ್ಗೆ ಹೊಸ ಯೋಜನೆಯನ್ನು ಪ್ರಾರಂಭಿಸಲು ಪ್ರಸ್ತಾಪಿಸಲಾಗಿದೆ. ಸದರಿ ಯೋಜನೆಯನ್ವಯ ಮುಸ್ಲಿಂ ಮಹಿಳೆಯರಿಗೆ ಪ್ರತಿಷ್ಠಿತ ಸರ್ಕಾರೇತರ ಸಂಸ್ಥೆಗಳಿಂದ ಗಣಕ ಯಂತ್ರ ತರಬೇತಿ ನೀಡಲು ಉದ್ದೇಶಿಸಲಾಗಿದ್ದು, NGOಗಳು ಈಗಾಗಲೇ ವಿದ್ಯಾಸಂಸ್ಥೆಗಳನ್ನು ತರಬೇತಿಗಳನ್ನು ನಡೆಸುವವರು ಮೂಲಭೂತ ಸೌಕರ್ಯ ಹೊಂದಿರುವಂತಹ ಸಂಸ್ಥೆಗಳು ಮುಸ್ಲಿಂ ಹೆಣ್ಣು ಮಕ್ಕಳಿಗೆ ಉಚಿತವಾಗಿ 6 ತಿಂಗಳ ಅವಧಿಗೆ ತರಬೇತಿ ನೀಡತಕ್ಕದ್ದು ಮತ್ತು ತರಬೇತಿ ನೀಡುವ ಶಿಕ್ಷಕರಿಗೆ ಪ್ರತಿ ತಿಂಗಳು ರೂ. 5,000ಗಳನ್ನು ಹಾಗೂ ಸಹಾಯಕ ತರಬೇತಿ ಶಿಕ್ಷಕರಿಗೆ ಪ್ರತಿ ತಿಂಗಳು ರೂ. 3,000 ಸಂಬಳ ಅನುದಾನವನ್ನು ಸಂಬಂಧಿತ ಸಂಸ್ಥೆಗಳಿಗೆ ನೀಡಬೇಕೆಂದು ಪ್ರಸ್ತಾಪಿಸಲಾಗಿದೆ.

ಸದರಿ ಪ್ರಸ್ತಾವನೆಯ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿ, ಸರ್ಕಾರವು ಕೆಲವು ಷರತ್ತುಗಳನ್ನು ವಿಧಿಸಿ, ಕರ್ನಾಟಕ ರಾಜ್ಯ ವಕ್ಫ್ ಮಹಿಳಾ ಅಭಿವೃದ್ಧಿ ಪ್ರತಿಷ್ಠಾನದ ಯೋಜನೆಯಡಿಯಲ್ಲಿ ಅಲ್ಪಸಂಖ್ಯಾತರ ಮುಸ್ಲಿಂ ಮಹಿಳೆಯವರಿಗೆ ಗಣಕಯಂತ್ರ ತರಬೇತಿ ನೀಡಲು ನಿರ್ಧರಿಸಲಾಗಿದೆ. ಆದ್ದರಿಂದ ಈ ಆದೇಶ

**ಸರ್ಕಾರದ ಆದೇಶ ಸಂಖ್ಯೆ: MWD 90 WFW 2009, ಬೆಂಗಳೂರು ದಿ: 03-11-2009**

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ, ಕರ್ನಾಟಕ ರಾಜ್ಯ ವಕ್ಫ್ ಮಹಿಳಾ ಅಭಿವೃದ್ಧಿ ಪ್ರತಿಷ್ಠಾನ ಯೋಜನೆಯಡಿಯಲ್ಲಿ **ಅಲ್ಪಸಂಖ್ಯಾತರ ಮುಸ್ಲಿಂ ಮಹಿಳೆಯವರಿಗೆ ಗಣಕಯಂತ್ರ ತರಬೇತಿ** ಎಂಬ ಹೊಸ ಯೋಜನೆಯನ್ನು ಜಾರಿಗೆ ತಂದು ಉಚಿತವಾಗಿ ತರಬೇತಿ ನೀಡುವ ಸರ್ಕಾರೇತರ ಸಂಸ್ಥೆಗಳಿಗೆ ಗೌರವಧನ ನೀಡುವ ಮೂಲಕ ಸಹಾಯ ನೀಡಬೇಕೆಂಬ ದೃಷ್ಟಿಯಿಂದ ಪ್ರತಿಷ್ಠಿತ NGO'sಗಳು, ವಿದ್ಯಾಸಂಸ್ಥೆಗಳು, ಮೂಲಭೂತ ಸೌಕರ್ಯಗಳನ್ನು ಹೊಂದಿರುವಂತಹ ಸಂಸ್ಥೆಗಳ ತರಬೇತಿ ಶಿಕ್ಷಕರಿಗೆ 2009-10ನೇ ಸಾಲಿನಿಂದ ಅನುದಾನವನ್ನು ಮಂಜೂರು ಮಾಡಲು ಈ ಕೆಳಕಂಡಂತೆ ಆದೇಶಿಸಿದೆ.

1. ವಿದ್ಯಾಸಂಸ್ಥೆಗಳನ್ನು, ಕಂಪ್ಯೂಟರ್ ತರಬೇತಿಗಳನ್ನು ನಡೆಸುವವರು, ಮೂಲಭೂತ ಸೌಕರ್ಯ ಹೊಂದಿರುವಂತಹ NGO/ಸಂಸ್ಥೆಗಳು ಮುಸ್ಲಿಂ ಹೆಣ್ಣು ಮಕ್ಕಳಿಗೆ ಉಚಿತವಾಗಿ 6 ತಿಂಗಳ ಕಂಪ್ಯೂಟರ್ ತರಬೇತಿ ನೀಡುವಂತಹ ಸಂಸ್ಥೆಗಳು ಅರ್ಜಿಗಳನ್ನು ಸಲ್ಲಿಸತಕ್ಕದ್ದು.

2. ತರಬೇತಿ ನೀಡುವ ಅವಧಿಯು ಕನಿಷ್ಠ 6 ತಿಂಗಳಾಗಿದ್ದು, ಪ್ರತಿ 2 ತಂಡಗಳಲ್ಲಿ ಅಂದರೆ ಬೆಳಿಗ್ಗೆ ಮತ್ತು ಸಾಯಂಕಾಲ ಉಚಿತ ತರಬೇತಿಯನ್ನು ಕನಿಷ್ಠ 50 ಅಭ್ಯಾರ್ಥಿಗಳಿಗೆ ನೀಡತಕ್ಕದ್ದು.

3. ತರಬೇತಿ ನೀಡುವ ಶಿಕ್ಷಕರು ಕಂಪ್ಯೂಟರ್ ವಿದ್ಯಾರ್ಹತೆಯನ್ನು ಹೊಂದಿದ್ದು, ಕಂಪ್ಯೂಟರ್ ತರಬೇತಿ ನೀಡುವಲ್ಲಿ ಅನುಭವಸ್ಥರಾಗಿರಬೇಕು